ಅಧ್ಯಕ್ಷರು : ಇದನ್ನು ಕಂದಾಯ ಮಂತ್ರಿಗಳು ಬಂದಾಗ ಕೇಳಿ.

(ಗೊಂದಲ)

ಅಧ್ಯಕ್ಷರು : ಈಗ ನಿಯಮ 334, ಶ್ರೀ ಎಲ್.ಆರ್. ಶಿವರಾಮೇಗೌಡ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ ಇದು ನಮಗೆ ಬಹಳ ಮುಖ್ಯ. 334ಕ್ಕಿಂತ ಬಹಳ ಮುಖ್ಯವಾದುದು. ದಯವಿಟ್ಟು ತಾವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು : ನಿಮ್ಮ ರಕ್ಷಣೆಗೆ, ಕಂದಾಯ ಮಂತ್ರಿಗಳು ಬಂದಕೂಡಲೇ ಬರುತ್ತೇನೆ.

(ಗೊಂದಲ)

Sri D.B. Chandregowda : The Hon'ble Minister has agreed to reply. I will just bring it your kind notice. ನಾನು ಫೋಟೋಗಳನ್ನು ಅವರಿಗೂ ಕಳುಹಿಸಿ ಕೊಟ್ಟಿದ್ದೇನೆ. ಕೋಲಾರ ಜಿಲ್ಲೆಯಲ್ಲಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಮುಖ್ಯಮಂತ್ರಿಗಳು ಆದೇಶ ಕೊಡಬಹುದಲ್ಲಾ.

ಅಧ್ಯಕ್ಷರು : ನಾಳೆಯೂ ಸದನ ಇದೆ, ಕುಳಿತುಕೊಳ್ಳಿ.

12.20 ಪಿ.ಎಂ.

ದಿನಾಂಕ 17-3-91 ರಂದು ಕೋಲಾರ ಜಿಲ್ಲೆಯ ಒಡಗೂರು ಗ್ರಾಮದಲ್ಲಿ ಗುಂಪು ಘರ್ಷಣೆ.

ಶ್ರಿ ಡಿ.ಬಿ. ಚಂದ್ರೇಗೌಡ : ಅನೇಕ ಪತ್ರಿಕೆಗಳಲ್ಲಿ ಹಾಗೂ ಮಾರ್ಚಿ 21ರ ಪ್ರಜಾವಾಣಿ ಪತ್ರಿಕೆಯಲ್ಲಿ ಮತ್ತು ಮಂಗಳವಾರ 19ರ ಕೋಲಾರ ಪತ್ರಿಕೆಯಲ್ಲಿ 17ನೇ ತಾರೀಖು ಕೋಲಾರ ಜಿಲ್ಲೆಯ ಒದಗೂರು ಎಂಬ ಗ್ರಾಮದಲ್ಲಿ ಗುಂಪು ಘರ್ಷಣೆ ನಡೆದಿತ್ತು. ಎರಡು ಗುಂಪಿನವರಿಗೂ ಗಲಾಟೆ ಆಗಿದ್ದು ತೊಂದರೆ ಆಗಿದೆ. ಆದರೆ ಪೋಲೀಸಿನವರು ಒಂದೇ ಗುಂಪಿನ ಹಾಗೂ ವಿಶೇಷವಾಗಿ ಹೆಣ್ಣುಮಕ್ಕಳ ಬಟ್ಟೆಬರೆಗಳನ್ನು ಹರಿದಿರುವುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಈ ರೀತಿಯ ನಡವಳಿಕೆ ಪೋಲೀಸ್ ಅಧಿಕಾರಿಗಳಿಂದ ಏಕೆ ಆಗಬೇಕು? ಇವತ್ತು ಏನಾದರೂ ರಾಜಕೀಯ ಪ್ರೇರಿತವಾಗಿ ಮಾಡುತ್ತಿದ್ದಾರೋ ಪೋಲೀಸಿನವರು ಏನಾದರೂ ಕಾಂಗ್ರೆಸ್ ಏಜೆಂಟುಗಳು ಎಂದು ತಿಳಿದುಕೊಂಡಿದ್ದಾರೋ? ಹೆಣ್ಣುಮಕ್ಕಳ ಮಾನವನ್ನು ಕಾಪಾಡಿಕೊಡತಕ್ಕ ಸೌಜನ್ಯ ಇಲ್ಲದಿದ್ದರೆ, ಯಾರಿಂದ ರಕ್ಷಣೆ ಬೇಕು. ತಮಗೆ ಫೋಟೋಗಳನ್ನು ಕಳಿಹಿಸಿಕೊಡುತ್ತೇನೆ. ಯುಗಾದಿ ಹಬ್ಬಕ್ಕೆ ವಿಶೇಷವಾಗಿ ಮಾಡಿದಂತಹ ಹೋಳಿಗೆ ಎಲ್ಲವನ್ನು ಬಿಸಾಕಿದ್ದಾರೆ. ಅಲ್ಲಿ ಆಗಿರತಕ್ಕ ಪ್ರಕರಣದ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ತಾವು ಉತ್ತರವನ್ನು ಹೇಳುತ್ತೀರೆಂದು ನಿಂತಿದ್ದೇನೆ. ಉತ್ತರವನ್ನು ನಾಳೆ ಹೇಳುವುದಾದರೆ ವಿವರವಾದ ವಿವರಣೆಯನ್ನು ಕೊಡಲಿಕ್ಕೆ ಸಿದ್ದನಿದ್ದೇನೆ. ದಯವಿಟ್ಟು ನೀವೇ ಸ್ವತಃ ನಿಂತು ತನಿಖೆ ನಡೆಸಿ ತೊಂದರೆಯಾಗಿರುವ ಜನಕ್ಕೆ ಪರಿಹಾರವನ್ನು ಒದಗಿಸುವುದು ಒಂದು ಕಡೆ, ಎರಡನೆಯದು ಒಂದು ಸೆಕ್ಷನ್‌ನವರನ್ನು ಮಾತ್ರ ನೀವು ಅರೆಸ್ಟ್ ಮಾಡಿರುತ್ತೀರಿ. ಇನ್ನೊಂದು ಸೆಕ್ಷನ್‌ನವರಿಗೆ ಸಂಪೂರ್ಣವಾದಂತಹ ರಕ್ಷಣೆಯನ್ನು ಕೊಡುತ್ತೀರಿ, ದಯವಿಟ್ಟು ಈ ಫೋಟೋಗಳನ್ನು ತಾವು ನೋಡಬೇಕೆಂದು ಅಧ್ಯಕ್ಷರ ಮುಖಾಂತರ ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಇದಕ್ಕೆ ಸಂಬಂಧಪಟ್ಟ ಹಾಗೆ ನಾನು ಕೂಡ ಸೂಚನೆಯನ್ನು ಕಳುಹಿಸಿದ್ದೇನೆ. ಈ ತಿಂಗಳು 17ನೇ ತಾರೀಖು ಒದೆಗೂರಿನಲ್ಲಿ

ಎರಡು ಗುಂಪುಗಳ ನಡುವೆ ಘರ್ಷಣೆ ಆಗಿದೆ. ಆದರೆ ಚರ್ಚೆಗೆ ನಾನು ಹೋಗುವುದಿಲ್ಲ. ಗುಂಪು ಘರ್ಷಣೆಯ ಬಗ್ಗೆ ಪೋಲೀಸ್ ಇಲಾಖೆಯವರು ಏನು ಕಾನೂನು ಕ್ರಮ ತೆಗೆದುಕೊಳ್ಳುತ್ತಾರೆ ಅದರ ಬಗ್ಗೆ ನನ್ನ ಅಭ್ಯಂತರವಿಲ್ಲ. ಅಲ್ಲಿ ಏನಾಗಿದೆ ಅಂದರೆ 17ನೇ ತಾರೀಖು ಸೊಸೈಟಿ ಎಲೆಕ್ಷನ್‌ನಲ್ಲಿ ಎಲ್ಲಾ 12 ಸೀಟುಗಳು 28-2-91ರಂದು ಜನತಾದಳ ಗೆದ್ದಿದೆ. ಅಲ್ಲಿ ಕಾಂಗ್ರೆಸ್‌ನವರು ಇರತಕ್ಕ ಒಂದು ಊರು. ಆ ಒಂದು ನೆಪ ಇಟ್ಟುಕೊಂಡು ಯುಗಾದಿ ಹಬ್ಬದ ದಿವಸ ರಾತ್ರಿ 9-30ರಲ್ಲಿ ಘರ್ಷಣೆ ನಡೆಯಿತು. ಘರ್ಷಣೆಯಾದ ಜನ ನಾವೇ ಆ ಕೆಲಸವನ್ನು ಮಾಡಿದ್ದೇವೆಂದು ಒಪ್ಪಿಕೊಂಡಿದ್ದಾರೆ. ಅವರೇ ವಾಲೆಂಟಿರಿಯಾಗಿ ಪೋಲೀಸ್ ಠಾಣೆಗೆ ಹೋಗಿದ್ದಾರೆ. 9ಜನ ನಿರಪರಾಧಿಗಳ ಮೇಲೆ ಕೇಸ್ ಹಾಕಿದ್ದಾರೆ. ಊಟ ಮಾಡುತ್ತಿದ್ದಾರೆ ಅವಕಾಶ ಕೊಡಿ ಎಂದು ಮನೆಯಲ್ಲಿ ಹೆಂಗಸರು ಹೇಳಿದರೂ ಕೂಡ ಅಲ್ಲಿನ ಸರ್ಕಲ್ ಇನ್ಸ್‌ಪೆಕ್ಟರ್ ಆದ ಸತ್ಯನಾರಾಯಣ್‌ರವರು ಪಾನಮತ್ತರಾಗಿ ಬಂದು ಗಲಾಟೆ ಮಾಡಿದ್ದಾರೆ. ಅನೇಕ ಪ್ರಕರಣಗಳಲ್ಲಿ ಅವರು ಹೀಗೆ ಮಾಡಿದ್ದಾರೆ. ಕಾನೂನಿನ ಚೌಕಟ್ಟಿನ ಒಳಗಡೆ ಬೇಕಾದರೆ ಕ್ರಮತೆಗೆದುಕೊಳ್ಳಲಿ, ಕಾನೂನನ್ನು ಮೀರಿ ಬೇರೆಬೇರೆ ಹೆಣ್ಣುಮಕ್ಕಳ ಮೇಲೆಯೂ ದೌರ್ಜನ್ಯ ಮಾಡಿ ಬೂಟು ಕಾಲಿನಲ್ಲಿ ಹೋಳಿಗೆ ತಿಂಡಿಯನ್ನೆಲ್ಲ ತುಳಿದಿದ್ದಾರೆ. 16 ಜನ ಕಾಂಗ್ರೆಸ್‌ನವರು ಇದ್ದರೂ ಇವತ್ತಿನವರೆಗೂ ಯಾರನ್ನೂ ಅರೆಸ್ಟ್ ಮಾಡಿಲ್ಲ. ಆದ್ದರಿಂದ ಆ ಅಧಿಕಾರಿಯನ್ನು ಇವತ್ತೇ ಸಸ್ಪೆಂಡ್ ಮಾಡಬೇಕು. ಏಕೆಂದರೆ ಅಂತಹ ಒಬ್ಬ ಅಧಿಕಾರಿಯಿಂದ ಮಾನ್ಯ ಧರ್ಮಸಿಂಗ್ ಅವರಿಗೂ ಕೆಟ್ಟ ಹೆಸರು ಬರುತ್ತದೆ. ಇಡೀ ಕಾಂಗ್ರೆಸ್ ಸರ್ಕಾರಕ್ಕೂ ಕೂಡ ಕೆಟ್ಟ ಹೆಸರು ಬರುವಂತಹ ಪರಿಸ್ಥಿತಿ ಇದೆ. ಇಂತಹ ಅಧಿಕಾರಿಯ ಮೇಲೆ ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಧರ್ಮಸಿಂಗ್‌ರವರು ಸಸ್ಪೆಷನ್ ಆಜ್ಞೆಯನ್ನು ಈಗಲೇ ಹೊರಡಿಸಬೇಕೆಂದು ತಮ್ಮ ಮುಖೇನ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಧರ್ಮಸಿಂಗ್ : ವಿರೋಧಪಕ್ಷದ ನಾಯಕರು ಕೋಲಾರ ಜಿಲ್ಲೆಯ ಘಟನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾರಾಯಣಸ್ವಾಮಿಯವರು ನಿನ್ನೆ ಕೂಡ ನನ್ನನ್ನು ಬೇಟಿ ಮಾಡಿ ಮಾತನಾಡಿದ್ದಾರೆ. ವಿಧಾನ ಪರಿಷತ್ತಿನಲ್ಲಿ ಇದರ ಬಗ್ಗೆ ಗಮನ ಸೆಳೆಯುವ ಸೂಚನೆ ಇತ್ತು. ಮಾನ್ಯ ನರಸಿಂಹಮೂರ್ತಿಯವರು ಉತ್ತರ ಕೊಡುತ್ತಿದ್ದಾರೆ. ಈ ಘಟನೆ ನಡೆದ ಬಗ್ಗೆ ಪೋಲೀಸಿನವರ ವರ್‌ಷನ್ ಒಂದು ಕಡೆ ಇದೆ. ನಾಗರಾಜು ಅವರ ಮನೆಗೆ ಹೋದಾಗ ಆದಂತಹ ಈ ಘಟನೆ ಚುನಾವಣೆಯ ಸಂದರ್ಭದಲ್ಲಿ ಆಗಿದೆ. ಹೆಣ್ಣು ಮಕ್ಕಳಿಗೆ ಹೊಡೆದಿರುವುದು ನನ್ನ ಮನಸ್ಸಿಗೆ ಹಿಡಿಸುತ್ತಿಲ್ಲ. ಡಿ.ಐ.ಜಿ. ಸುಭಾಷ್ ಭರಣಿಯವರನ್ನು ಖುದ್ದಾಗಿ ಕಳುಹಿಸುತ್ತೇವೆ. ಘಟನೆಯ ತನಿಖೆ ನಡೆಸಿ ವರದಿ ಬಂದಮೇಲೆ definitely I am going to take action.

ಪ್ರಕಟಣೆ.

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ, ನಮ್ಮ ಸದನದ ಸದಸ್ಯರು ಯಾರು ಯಾರು "Who is who" ಕಿರುಹೊತ್ತಿಗೆ ಬರಬೇಕಾಗಿದ್ದು ಕಾರಣಾಂತರದಿಂದ ಕೆಲವು ಮಾನ್ಯ ಸದಸ್ಯರುಗಳು ಒದಗಿಸಿರುವಂಥ ಭಾವಚಿತ್ರಗಳು ಒಂದೇ ಪ್ರಮಾಣದಲ್ಲಿ ಇಲ್ಲದೇ ಚೆನ್ನಾಗಿಲ್ಲದೇ ಇರುವುದಿಲ್ಲ. ನಮ್ಮ ಕಿರುಹೊತ್ತಿಗೆ ಚೆನ್ನಾಗಿ ಬರಬೇಕೆಂಬುದು ನಮ್ಮ ನಿಮ್ಮ ಆಸೆ. ಆದ್ದರಿಂದ ನಮ್ಮ ಫೋಟೋಗ್ರಾಫರ್ ಒಪ್ಪಲು ರೀಡಿಂಗ್ ರೂಮ್‌ನಲ್ಲಿ 3 ದಿವಸದಿಂದ ಕಾಯುತ್ತಿದ್ದಾರೆ. 106 ಮಾನ್ಯ ಸದಸ್ಯರು ಮಾತ್ರ ಅಲ್ಲಿಗೆ ಹೋಗಿದ್ದಾರೆ. ದಯವಿಟ್ಟು ತಾವುಗಳು ಯಾರು ಹೋಗಿಲ್ಲವೋ, ಅವರುಗಳು